# Sri Shankaracharya Prashnottara

| Sl. No. | Questions | Answers |
|---|---|---|
| 1 | ಆಚಾರ್ಯತ್ರಯರಲ್ಲಿ ಮೊದಲನೆಯವರು ಯಾರು? | ಶ್ರೀ ಆದಿಶಂಕರ ಭಗವತ್ಪಾದರು. |
| 2 | ಶ್ರೀಶಂಕರಾಚಾರ್ಯರ ಅವತಾರದ ಸೂಚನೆ ಯಾವ ಪುರಾಣಗಳಲ್ಲಿದೆ? | ಶಂಕರ ದಿಗ್ವಿಜಯ |
| 3 | ಶಂಕರ ವಿಜಯ' ಹೆಸರಿನ ಗ್ರಂಥವನ್ನು ಬರೆದ ಮೂವರು ವಿದ್ವಾಂಸರು ಯಾರು? | ಆನಂದಗಿರಿ, ಚಿದ್ವಿಲಾಸಯತಿ ಮತ್ತು ವ್ಯಾಸಾಚಲ |
| 4 | ಶಂಕರ ವಿಜಯ ಸಾರ' ಯಾರ ಕೃತಿ? | ಸದಾನಂದ ವ್ಯಾಸ |
| 5 | 'ವಿಜಯ ಡಿಂಡಿಮ'ವನ್ನು ಬರೆದವರು ಯಾರು? | ಪದ್ಮಪಾದರು |
| 6 | 'ಪ್ರಾಚೀನ ಶಂಕರ ವಿಜಯ' ಯಾರ ಕೃತಿ? | ಮೂಕ ಶಂಕರ |
| 7 | 'ಶಂಕರಾನಂದ ಚಂಪೂ' ಗ್ರಂಥವನ್ನು ಬರೆದವರು ಯಾರು? | ಗುರುಸ್ವಯಂಭೂನಾಥ |
| 8 | ಬಲದೇವ ಉಪಾಧ್ಯಾಯರು ಹಿಂದಿಯಲ್ಲಿ ಬರೆದ ಶಂಕರರಿಗೆ ಸಂಬಂಧಿಸಿದ ಗ್ರಂಥ ಯಾವುದು? | ಶ್ರೀ ಶಂಕರಾಚಾರ್ಯ |
| 9 | ಮಾಧವೀಯ ಶಂಕರ ದಿಗ್ವಿಜಯ'ವನ್ನು ಭಾಷಾಂತರಿಸಿದವರು ಯಾರು? | ವಿದ್ವಾನ್ ರಂಗನಾಥ ಶರ್ಮಾ |
| 10 | ಶಂಕರರ ಕುರಿತು ಪದ್ಮಭೂಷಣ ಟಿ. ಎಂ. ಪಿ. ಮಹಾದೇವನ್ ಅವರು ಇಂಗ್ಲಿಷ್‌ನಲ್ಲಿ ಬರೆದ ಕೃತಿ ಯಾವುದು? | ಶಂಕರಾಚಾರ್ಯ |
| 11 | 'ಯುಗ ಪುರುಷ ಶಂಕರ' ಯಾರ ಕೃತಿ? | ವಿದ್ವಾನ್ ರಂಗನಾಥ ಶರ್ಮಾ |
| 12 | ಶ್ರೀ ಶಂಕರರ ಅವತಾರಕ್ಕಿಂತ ಮೊದಲು ಭಾರತದಲ್ಲಿದ್ದ ಪ್ರಮುಖ ಅವೈದಿಕ ಮತಗಳು ಯಾವುದು? | ಚಾರ್ವಾಕ, ಬೌದ್ಧ ಮತ್ತು ಜೈನ |
| 13 | 'ದ್ವಿಸಪ್ತತಿ ಮತೋಚ್ಛೇತ್ರೇ ನಮಃ' ಎಂಬುದು ಎಲ್ಲಿ ಬರುತ್ತದೆ? | ಶ್ರೀಮಚ್ಛಂಕರ ಭಗವತ್ಪಾದರಅಷ್ಟೋತ್ತರ ಶತ ನಾಮಾವಳಿಯಲ್ಲಿ |
| 14 | ಆಚಾರ್ಯ ಶಂಕರರ ಸಮಕಾಲೀನರಾಗಿದ್ದ ಮೀಮಾಂಸಾಶಾಸ್ತ್ರ ಮೂರ್ಧನ್ಯರು ಯಾರು? | ಕುಮಾರಿಲಭಟ್ಟರ |
| 15 | ಕುಮಾರಿಲ ಭಟ್ಟರು ಯಾರ ಅವತಾರ? | ಷಣ್ಮುಖನ |
| 16 | ಕುಮಾರಿಲರನ್ನು ಸೌಧದ ತುದಿಯಿಂದ ಕೆಳಕ್ಕೆ ತಳ್ಳಿದವರು ಯಾರು? | ಧರ್ಮಪಾಲನ ಶಿಷ್ಯರು |
| 17 | ಸೌಧದ ತುದಿಯಿಂದ ಬಿದ್ದಾಗ ಕುಮಾರಿಲರನ್ನು ರಕ್ಷಿಸಿದ್ದು ಯಾರು? | ವೇದಪುರುಷ |
| 18 | ವೇದ ಪ್ರಾಮಾಣ್ಯ ವಿಷಯದಲ್ಲಿ 'ಯದಿ' ಎಂಬ ಸಂದೇಹ ಸೂಚಕ ಪದ ಬಳಸಿದ್ದರಿಂದ ಕುಮಾರಿಲರಿಗೆ ಏನಾಯಿತು? | ಒಂದು ಕಣ್ಣು ಹೋಯಿತು |
| 19 | ಬೌದ್ಧಚಾರ್ಯ ಧರ್ಮಪಾಲನು ಯಾರಿಂದ ವಾದದಲ್ಲಿ ಸೋತನು? | ಕುಮಾರಿಲರಿಂದ |
| 20 | ಪರಶಿವನ ಪರಮಾವತಾರವೆಂದು ಪ್ರಸಿದ್ಧರಾದ ಆಚಾರ್ಯರು ಯಾರು? | ಶ್ರೀ ಶಂಕರಾಚಾರ್ಯರು |
| 21 | ಕೇರಳ ರಾಜ್ಯದ ಯಾವ ಗ್ರಾಮವು ಆಚಾರ್ಯರ ಜನ್ಮಸ್ಥಳ? | ಕಾಲಟಿ |
| 22 | ಶಿವಗುರುವಿನ ಗೋತ್ರ ಯಾವುದು? | ಅತ್ರಿ |
| 23 | ಶಿವಗುರುವಿನದು ಯಾವ ವೇದದ ಯಾವ ಶಾಖೆ? | ಕೃಷ್ಣ ಯಜುರ್ವೇದದ ತೈತ್ತಿರೀಯ ಶಾಖೆ |
| 24 | ಶಿವಗುರುವಿನ ತಂದೆ ಯಾರು? | ವಿದ್ಯಾಧಿರಾಜ |
| 25 | ಸಂತತಿಯನ್ನು ಪಡೆಯುವ ಉದ್ದೇಶದಿಂದ ಶಿವಗುರು ಮತ್ತು ಆರ್ಯಾಂಬೆ ಯಾವ ಕ್ಷೇತ್ರಕ್ಕೆ ಹೋದರು? | ವೃಷಭಾಚಲ |
| 26 | ವೃಷಭಾಚಲದಲ್ಲಿ ಶ್ರೀ ಚಂದ್ರಮೌಳೀಶ್ವರ ದೇವಸ್ಥಾನವನ್ನು ಕಟ್ಟಿಸಿದವರು ಯಾರು? | ರಾಜಶೇಖರ ಮಹಾರಾಜ |
| 27 | ಶಂಕರರ ತಾಯಿ ಆರ್ಯಾಂಬೆಯನ್ನು ಮಾಧವೀಯ ಶಂಕರ ದಿಗ್ವಿಜಯದಲ್ಲಿ ಯಾವ ಹೆಸರಿನಿಂದ ಕರೆಯಲಾಗಿದೆ? | ಸತೀದೇವಿ |
| 28 | ಬಾಲಶಂಕರನಿಗೆ ಎಷ್ಟನೆ ವಯಸ್ಸಿನಲ್ಲಿ ಉಪನಯನ ಸಂಸ್ಕಾರವಾಯಿತು? | 5 |
| 29 | ಮನೆಯಲ್ಲಿ ಏನೂ ಇಲ್ಲದ್ದರಿಂದ ಬ್ರಾಹ್ಮಣ ಪತ್ನಿಯು ಏನು ಭಿಕ್ಷೆ ನೀಡಿದಳು? | ಒಣ ನೆಲ್ಲಿಕಾಯಿಯನ್ನು |
| 30 | ಬ್ರಾಹ್ಮಣ ಪತ್ನಿಯನ್ನು ಅನುಗ್ರಹಿಸುವ ಸಂದರ್ಭದಲ್ಲಿ ಶಂಕರನು ಲಕ್ಷ್ಮಿಯನ್ನು ಕುರಿತು ರಚಿಸದ ಸ್ತೋತ್ರಕ್ಕೆ ಏನೆಂದು ಹೆಸರು? | ಕನಕಧಾರಾ ಸ್ತೋತ್ರ |
| 31 | ಶಂಕರನು ಎಷ್ಟನೆಯ ವಯಸ್ಸಿನಲ್ಲಿ ಚತುರ್ವೇದಗಳಲ್ಲಿ ಪಾರಂಗತನಾಗಿದ್ದನು? | ಎಂಟನೇ |
| 32 | ರಾಜಶೇಖರನು ತಾನು ಬರೆದ ಮೂರು ನಾಟಕಗಳನ್ನು ಯಾರ ಮುಂದೆ ಓದಿ ಹೇಳಿದನು? | ಶಂಕರರ |
| 33 | ಆರ್ಯಾಂಬೆ ತನ್ನ ಮಗನ ಆಯುಷ್ಯ ಎಷ್ಟೆಂದು ವಿಚಾರಿಸಿದ್ದು ಯಾರಲ್ಲಿ? | ಅಗಸ್ತ್ಯ, ದಧೀಚಿ ಮೊದಲಾದ 6 ಋಷಿಗಳಲ್ಲಿ |
| 34 | 'ಪೂರ್ಣಾನದಿಯ ಅಲೆಗಳು ನನ್ನನ್ನು ಬಾಧಿಸುತ್ತಿವೆ. ಇಲ್ಲಿರಲು ಸಾಧ್ಯವಿಲ್ಲ ಎಂಬ ಅಶರೀರವಾಣಿ ಎಲ್ಲಿಂದ ಕೇಳಿ ಬಂತು? | ಮನೆಯ ಸಮೀಪದ ಕೃಷ್ಣ ದೇವಾಲಯದಿಂದ |
| 35 | ಗೋವಿಂದ ಭಗವತ್ಪಾದರು ಯಾರ ಶಿಷ್ಯರು? | ಗೌಡಪಾದರ |
| 36 | ಗೋವಿಂದ ಭಗವತ್ಪಾದರು ಯಾರ ಸ್ವರೂಪರು? | ಪತಂಜಲಿ ಮಹರ್ಷಿ |
| 37 | ಕಾಶೀಕ್ಷೇತ್ರದಲ್ಲಿ ಶಂಕರರು ಸ್ನಾನಕ್ಕೆ ಹೋಗುತ್ತಿದ್ದಾಗ ದಾರಿಯಲ್ಲಿ ಎದುರಾದವನು ಯಾರು? | ಅಂತ್ಯಜ |
| 38 | ಅಂತ್ಯಜನಿಗೆ ನಮಸ್ಕರಿಸುವಾಗ ಆಚಾರ್ಯರು ರಚಿಸಿದ ಶ್ಲೋಕಗಳಿಗೆ ಏನೆಂದು ಹೆಸರು? | ಮನೀಷಾ ಪಂಚಕ |
| 39 | ಬ್ರಹ್ಮಸೂತ್ರಗಳಿಗೆ ಭಾಷ್ಯ ರಚಿಸುವಂತೆ ಆಚಾರ್ಯರಿಗೆ ಆದೇಶಿಸಿ, ಅದೃಶ್ಯರಾದದ್ದು ಯಾರು? | ಪರಮೇಶ್ವರ |
| 40 | ನೃಸಿಂಹತಾಪಿನೀ ಉಪನಿಷತ್ತು ಮತ್ತು ಸನತ್ಸುಜಾತೀಯಕ್ಕೆ ಬದರೀಕ್ಷೇತ್ರದಲ್ಲಿ ಭಾಷ್ಯ ಬರೆದವರು ಯಾರು? | ಆಚಾರ್ಯ ಶಂಕರರು |
| 41 | ಶಂಕರರು ಕಾಶಿಯಲ್ಲಿದ್ದಾಗ ವೃದ್ಧ ಬ್ರಾಹ್ಮಣ ವೇಷದಲ್ಲಿ ಬಂದವರು ಯಾರು | ವೇದವ್ಯಾಸರು |
| 42 | ಆರ್ಯಾಂಬೆಗೆ ಯಾವ ಮಾಸದಲ್ಲಿ ಮತ್ತು ಯಾವ ತಿಥಿಯಲ್ಲಿ ಗಂಡು ಮಗು ಜನಿಸಿತು ? | ವೈಶಾಖ ಶುಕ್ಲ ಪಂಚಮಿ |
| 43 | ಮೊಸಳೆ ತನ್ನ ಕಾಲನ್ನು ಹಿಡಿದೆಳೆಯುತ್ತಿದ್ದಾಗ ಸಂನ್ಯಾಸ ಸ್ವೀಕರಿಸಲು ಶಂಕರರಿಗೆ ಒಪ್ಪಿಗೆ ನೀಡಿದವರು ಯಾರು? | ಆರ್ಯಾಂಬೆ |
| 44 | ಬ್ರಹ್ಮಚಾರಿ ಶಂಕರನನ್ನು ಅರಮನೆಗೆ ಕರೆತರಲು ಆದೇಶಿಸಿದ ಸಮಕಾಲೀನನಾದ ಕೇರಳದ ರಾಜ ಯಾರು? | ರಾಜಶೇಖರ |
| 45 | ಬ್ರಹ್ಮಸೂತ್ರಗಳ ಮತ್ತೊಂದು ಹೆಸರೇನು? | ವೇದಾಂತ ಸೂತ್ರ |
| 46 | ಮಾಧವೀಯ ಶಂಕರ ದಿಗ್ವಿಜಯ ಎಂಬ ಶಂಕರರ ಮೇಲಿನ ಗ್ರಂಥವನ್ನು ಯಾರು ರಚಿಸಿದರು? | ವಿದ್ಯಾರಣ್ಯರು |